# ಐಪಿಎಲ್ ವಿಜೇತ ತಂಡಗಳು

| ಆವೃತ್ತಿ | ವಿಜೇತ | ರನ್ನರ್ಸ್ ಅಪ್ |
|---|---|---|
| 2008 | ರಾಜಸ್ತಾನ್ ರಾಯಲ್ಸ್ | ಚೆನ್ನೈ ಸೂಪರ್ ಕಿಂಗ್ಸ್ |
| 2009 | ಡೆಕ್ಕನ್ ಚಾರ್ಜರ್ಸ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು |
| 2010 | ಚೆನ್ನೈ ಸೂಪರ್ ಕಿಂಗ್ಸ್ | ಮುಂಬೈ ಇಂಡಿಯನ್ಸ್ |
| 2011 | ಚೆನ್ನೈ ಸೂಪರ್ ಕಿಂಗ್ಸ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು |
| 2012 | ಕೋಲ್ಕತ್ತ ನೈಟ್ ರೈಡರ್ಸ್ | ಚೆನ್ನೈ ಸೂಪರ್ ಕಿಂಗ್ಸ್ |
| 2013 | ಮುಂಬೈ ಇಂಡಿಯನ್ಸ್ | ಚೆನ್ನೈ ಸೂಪರ್ ಕಿಂಗ್ಸ್ |
| 2014 | ಕೋಲ್ಕತ್ತ ನೈಟ್ ರೈಡರ್ಸ್ | ಕಿಂಗ್ಸ್ ಇಲೆವನ್ ಪಂಜಾಬ್ |
| 2015 | ಮುಂಬೈ ಇಂಡಿಯನ್ಸ್ | ಚೆನ್ನೈ ಸೂಪರ್ ಕಿಂಗ್ಸ್ |
| 2016 | ಸನ್‌ರೈಸರ್ಸ್ ಹೈದರಾಬಾದ್ | ರಾಯಲ್ ಚಾಲೆಂಜರ್ಸ್ ಬೆಂಗಳೂರು |

ರಾಜಸ್ತಾನ್ ರಾಯಲ್ ಮತ್ತು ಚೆನ್ನೈ ಸೂಪರ್ ಕಿಂಗ್ ತಂಡಗಳು ಕಳೆದ ಆವೃತ್ತಿಯಿಂದ ಅಮಾನತುಗೊಂಡಿವೆ.

**6 ಆಟಗಾರರನ್ನು ಬಿಸಿಸಿಐ ಮಾನ್ಯತೆ ಪಡೆದ ತಂಡಗಳಲ್ಲಿ ಆಡುವ 22 ವರ್ಷದೊಳಗಿನ ವಯೋಮಿತಿ ವಿಭಾಗದಿಂದ ಆಯ್ಕೆ ಮಾಡಿಕೊಳ್ಳಬೇಕು.**

ತಕ್ಕಂತೆ ಬಿಸಿಸಿಐ ಮಾಡಿರುವ ನಿಯಮಗಳಿಂದಾಗಿ ಯುವಪ್ರತಿಭೆಗಳಿಗೆ ಐಪಿಎಲ್ ಟೂರ್ನಿಯು ಕೈಗೆಟುಕುವ ಸಿಹಿದ್ರಾಕ್ಷಿಯಾಗಿದೆ.

## ವರದಾನವಾದ ನಿಯಮಗಳು, ಟೂರ್ನಿಗಳು

ಬಿಸಿಸಿಐನಿಂದ ಮಾನ್ಯತೆ ಪಡೆದ ತಂಡಗಳು ಮತ್ತು ಟೂರ್ನಿಗಳಲ್ಲಿ ಆಡುವ 22 ವರ್ಷದೊಳಗಿನ ಆಟಗಾರರಿಗೆ ಪ್ರತಿಯೊಂದು ತಂಡವೂ ಆದ್ಯತೆ ನೀಡಬೇಕು. ಈ ವಯೋಮಿತಿಯೊಳಗಿನ ಕನಿಷ್ಠ ಆರು ಆಟಗಾರರನ್ನು ಪ್ರತಿಯೊಂದು ತಂಡವೂ ಸೇರಿಸಿಕೊಂಡಿರಬೇಕು ಎಂಬ ನಿಯಮವು ಉದಯೋನ್ಮುಖ ಆಟಗಾರರಿಗೆ ವರದಾನವಾಗಿದೆ.

ಅಲ್ಲದೇ ಬಿಸಿಸಿಐ ಮತ್ತು ರಾಜ್ಯ ಸಂಸ್ಥೆಗಳು ಐಪಿಎಲ್ ಮತ್ತು ಟ್ವೆಂಟಿ–20 ಕ್ರಿಕೆಟ್ ದಿಉಷ್ಟಿಯಲ್ಲಿಟ್ಟುಕೊಂಡೇ ಹಲವು ದೇಶಿ ಟೂರ್ನಿಗಳನ್ನು ಆಯೋಜಿಸುತ್ತಿದೆ.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ (ಅಂತರರಾಜ್ಯ ಮತ್ತು ಅಂತರವಲಯಮಟ್ಟ), ತಮಿಳುನಾಡು ಪ್ರೀಮಿಯರ್ ಲೀಗ್, ರಾಜವಾಡ ಪ್ರೀಮಿಯರ್ ಲೀಗ್, ಹರಿಯಾಣ ಪ್ರೀಮಿಯರ್ ಲೀಗ್, ಮಹಿಳೆಯರ ಅಂತರರಾಜ್ಯ ಟ್ವೆಂಟಿ–20 ಚಾಂಪಿಯನ್‌ಷಿಪ್ ಅದರಲ್ಲಿ ಪ್ರಮುಖವಾದವು.

2016ರಲ್ಲಿ ತಮಿಳುನಾಡು ಪ್ರೀಮಿಯರ್ ಲೀಗ್ ಆರಂಭವಾಗಿತ್ತು. ಅದರಲ್ಲಿ ಎಂಟು ಫ್ರಾಂಚೈಸ್‌ಗಳು ಆಡುತ್ತಿವೆ. ಈ ಬಾರಿ ಬಿಡ್‌ನಲ್ಲಿ ಬೇರೆ ಬೇರೆ ತಂಡಗಳಿಗೆ ಆಯ್ಕೆಯಾದ ಟಿ. ನಟರಾಜನ್ (ಕಿಂಗ್ಸ್ ಇಲೆವನ್ ಪಂಜಾಬ್– ₹ 3 ಕೋಟಿ), ಮುರುಗನ್ ಅಶ್ವಿನ್ (ಡೆಲ್ಲಿ ಡೇರ್‌ಡೆವಿಲ್ ₹ 1 ಕೋಟಿ) ಅವರು ಈ ಟೂರ್ನಿಯಲ್ಲಿ ಮಿಂಚಿದ್ದ ಪ್ರತಿಭೆಗಳು. ದಿನಗೂಲಿ ನೌಕರರೊಬ್ಬರ ಮಗ ನಟರಾಜನ್ ರಾತ್ರಿ ಬೆಳಗಾಗುವುದರಲ್ಲಿ ಕೋಟ್ಯಧೀಶರ ಪಟ್ಟ ಸೇರಿದ್ದಾರೆ.

ಟ್ರೋಫಿಯೊಂದಿಗೆ ಎಂಟೂ ತಂಡಗಳ ನಾಯಕರು

